



# ‘ಬ್ಯುಸಿ’ ರಾಧಿಕಾ

ಅಭಿನಯಕ್ಕೆ ಅವಕಾಶ ಇರುವ ಚಿತ್ರಗಳಷ್ಟೇ ಒಬ್ಬ ಹೀರೋಯಿನ್‌ಗೆ ಯಶಸ್ಸು ತಂದುಕೊಡುವುದಿಲ್ಲ. ಅದರ ಜತೆಗೆ ಕಮರ್ಷಿಯಲ್ ಚಿತ್ರಗಳಲ್ಲೂ ಮುಖ್ಯ ಪಾತ್ರಗಳಲ್ಲಿ ನಟಿಸಬೇಕು ಎನ್ನುವುದು ರಾಧಿಕಾ ಆಪ್ಟೆಗೆ ಈಗ ಖಚಿತವಾಗಿದೆ. ಅದಕ್ಕೆ ತಕ್ಕಂತೆ ಆಕೆಯೀಗ ಹಲವು ಕಮರ್ಷಿಯಲ್ ಚಿತ್ರಗಳಲ್ಲೂ ಮುಂಚೂಣಿಯಲ್ಲಿದ್ದಾಳೆ. ಅಕ್ಷಯ ಕುಮಾರ್ ಜತೆಗೆ ನಟಿಸಿದ ‘ಪ್ಯಾಡ್‌ಮ್ಯಾನ್’ ಆಕೆಗೆ ಸಾಕಷ್ಟು ಹೆಸರು ತಂದುಕೊಟ್ಟಿದೆ. ಈ ಮಧ್ಯೆ ‘ಲಸ್ಟ್ ಸ್ಟೋರೀಸ್’ ಸರಣಿ ಚಿತ್ರಗಳಲ್ಲಿ ರಾಧಿಕಾಳ ಅತ್ಯುತ್ತಮ ಅಭಿನಯ ನೋಡಿ ಬಾಲಿವುಡ್ ದಂಗಾಗಿದೆ. ವೆಬ್‌ನಲ್ಲಿ ಬಿಡುಗಡೆ ಕಂಡಿರುವ ಈ ಸರಣಿಯ ಚಿತ್ರ ನೋಡಿ, ಖ್ಯಾತನಾಮ ನಿರ್ದೇಶಕರೂ ಆಕೆಯನ್ನು ಮುಕ್ತಕಂಠದಿಂದ ಹೊಗಳಿದ್ದಾರೆ. ಈ ವೆಬ್ ಚಿತ್ರಗಳಲ್ಲಿ ಈಗ ನಿರ್ದೇಶಕರಾದ ಕರಣ್ ಜೋಹರ್, ಜೋಯಾ ಅಖ್ತರ್, ದಿಬಂಕರ್ ಬ್ಯಾನರ್ಜಿ, ಅನುರಾಗ್ ಕಶ್ಯಪ್ ಮುಂತಾದವರು ತೊಡಗಿಕೊಂಡಿರುವುದೂ ವಿಶೇಷ.

ಶ್ರೀರಾಮ್ ರಾಘವನ್ ನಿರ್ದೇಶನದ ‘ಅಂಧಾ ಧುನ್’ ಚಿತ್ರದಲ್ಲೂ ರಾಧಿಕಾಗೆ ಅತ್ಯುತ್ತಮ ಪಾತ್ರವಿದೆ. ಅದರಲ್ಲಿ ಆಯುಷ್ಮಾನ್ ಖುರಾನಾ ನಾಯಕ. ಸೈಫ್ ಅಲಿ ಖಾನ್ ಜತೆಗೆ ‘ಬಾಜಾರ್’, ದೇವ್ ಪಟೇಲ್ ಜತೆಗೆ ‘ದಿ ವೆಡಿಂಗ್ ಗೆಸ್ಟ್’ – ಹೀಗೆ ರಾಧಿಕಾ ಕೈತುಂಬ ಅವಕಾಶಗಳಿವೆ. ಇದರ ಜತೆಗೆ ಎರಡನೇ ವಿಶ್ವಯುದ್ಧದ ಕಥೆ ಆಧರಿತ ಹಾಲಿವುಡ್ ಸಿನಿಮಾವೊಂದರಲ್ಲೂ ರಾಧಿಕಾ ನಟಿಸಲಿದ್ದಾಳೆ. ಸದ್ಯಕ್ಕಂತೂ ರಾಧಿಕಾ ಬಾಲಿವುಡ್‌ನ ಹಾಟ್ ನಟಿಯರಲ್ಲಿ ಒಬ್ಬಳಾಗಿದ್ದಾಳೆ. ‘ನನ್ನ ಇಮೇಜ್ ಬದಲಾಗಿದೆ ಎಂದು ನನಗೆ ಅನ್ನಿಸಲ್ಲ. ಆದರೆ ಉತ್ತಮ ಅವಕಾಶಗಳು ಸಿಕ್ಕಿವೆ’ ಎನ್ನುತ್ತಾಳೆ ಆಕೆ.